ಪಿಡಬ್ಲ್ಯೂಃ 5 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 04.03.2025**

ಪಾಟೀ ಸವಾಲು : ಆರೋಪಿ ಪರಃ ಶ್ರೀ ಎಸ್ ಕೆ ವಕೀಲರಿಂದಃ

ಚಾಸಾ-1 ರವರ ಮನೆಯು ನಮ್ಮ ಮನೆಯಿಂದ 50 ಮೀಟರ್ ದೂರ ಇದೆ. ನಮ್ಮ ಮನೆಗೆ ಚಾಸಾ-1 ರವರ ಮನೆ ಕಾಣುತ್ತದೆ. ಚಾಸಾ-3 ಮತ್ತು 4 ರವರ ಮನೆ ನಮ್ಮ ಮನೆ ಪಕ್ಕದಲ್ಲಿ ಇದೆ. ನಾನು ಉಡುಪಿಯಲ್ಲಿ ಸುಧಾಕರ್ ಆಚಾರ್ಯ ಎಂಬುವವರ ಅಂಗಡಿಯಲ್ಲಿ ಚಿನ್ನದ ಕೆಲಸ ಮಾಡುತ್ತಿದ್ದೇನೆ. ವಾರಕ್ಕೊಮ್ಮೆ ಮನೆಗೆ ಬರುತ್ತೇನೆ. ಚಾಸಾ-1 ರವರು ಮನೆಯಲ್ಲಿ ಬೀಡಿ ಕಟ್ಟುತ್ತಾರೆ. ಚಾಸಾ-1 ರವರೊಂದಿಗೆ ಚಾಸಾ-3 ರಿಂದ 8 ರವರು ಒಳ್ಳೆಯ ರೀತಿಯಲ್ಲಿ ಇದ್ದಾರೆ. ಘಟನೆ ಆಗಿದೆ ಎಂದು ಹೇಳುವ ದಿನ ನಾನು ಮನೆಯಲ್ಲಿ ಇದ್ದೆ. ಘಟನೆಯ ಬಗ್ಗೆ ನನ ತಮ್ಮ ಶಶಿಧರ್ ಗೆ ಫೋನ್ ಬಂದಿರುತ್ತದೆ. ಅವರು ಕರೆದ ಕಾರಣ ನಾನು, ನನ್ನ ತಮ್ಮ ಶಶಿಧರ್ ಮತ್ತು ಅಣ್ಣ ಸಂತೋಷ್ ಚಾಸಾ-1 ರವರ ಮನೆಗೆ ಹೋಗಿರುತ್ತೇವೆ. ನಾವು ಹೋಗಿ ನೋಡಿದಾಗ ಚಾಸಾ-1 ರವರು ಮನೆಯ ಹೊರಗೆ ಕಾಂಪೌಂಡು ಬಳಿ ನಿಂತಿದ್ದರು. ಚಾಸಾ-1 ರವರ ಜೊತೆ ಚಾಸಾ-3 ಮತ್ತು 2 ನೇ ಆರೋಪಿ ಇದ್ದರು. ಮನೆಯ ಒಳಗಡೆ ಹೋಗಿ ಏನಾಗಿದೆ ಎಂದು ನೋಡುವ ಪ್ರಯತ್ನ ಮಾಡಿರುವುದಿಲ್ಲ. ಆ ದಿನ ರಾತ್ರಿ 11.00 ಗಂಟೆಗೆ 3-4 ಪೊಲೀಸರು ಬಂದಿರುತ್ತಾರೆ. ಪೊಲೀಸರು ಬರುವವರೆಗೆ ಕಳ್ಳತನ ಆಗಿರುವ ವಿಚಾರ ಗೊತ್ತಿರುವುದಿಲ್ಲ. ಪೊಲೀಸರು ಬಂದು ಕಿಟಕಿಯಿಂದ ಒಳಗೆ ನೋಡಿ ವಾಪಸ್ಸು ಹೋಗಿರುತ್ತಾರೆ. ಆ ದಿನ ಪೊಲೀಸರು ದಾಖಲೆಗಳನ್ನು ಬರೆದಿರುತ್ತಾರೆ ಮತ್ತು ನನ್ನ ಮತ್ತು ಚಾಸಾ-1, 7, ರವರ ಸಹಿ ಪಡೆದುಕೊಂಡಿರುತ್ತಾರೆ.

ಪೊಲೀಸರು ಮಧ್ಯರಾತ್ರಿ 1.30 ಗಂಟೆಗೆ ತನಕ ಇದ್ದರು. ನನ್ನ ತಮ್ಮ ಮತ್ತು ಅಣ್ಣನನ್ನು ವಿಚಾರಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 4 ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಚಾಸಾ-1 ರವರ ಮನೆಯಲ್ಲಿ ಪೊಲೀಸರು ಎಲ್ಲ ಸೇರಿ ಒಟ್ಟು 10 ಜನ ಇದ್ದೇವು. ಮರುದಿನ ಪೊಲೀಸರು ನನ್ನ ಸಮಕ್ಷಮದಲ್ಲಿ ಪೊಲೀಸರು ಬೀಗ, ಡಬ್ಬ, ಪರ್ಸ್ ವಶಪಡಿಸಿಕೊಂಡಿರುತ್ತಾರೆ. ಮರುದಿನ 5-6 ಜನ ಪೊಲೀಸರು ಬಂದಿರುತ್ತಾರೆ. ಮರುದಿನ ಚಾಸಾ-1 ರವರು ಸ್ಥಳಕ್ಕೆ ಬರಲು ಹೇಳಿರುತ್ತಾರೆ. ಮರುದಿನ ಮಧ್ಯಾಹ್ನ 12.00 ಗಂಟೆಗೆ ಬಂದು 2.00 ಗಂಟೆಯವರೆಗೆ ಇದ್ದರು. ನಾನು ಸಹಿ ಮಾಡಿದ ದಾಖಲೆಗಳಲ್ಲಿ ಏನು ಬರೆದಿದೆ ಎಂದು ಹೇಳಲು ಸಾಧ್ಯವಿಲ್ಲ. ಪೊಲೀಸ್ ಠಾಣೆಗೆ ಪೊಲೀಸರು ಫೋನ್ ಕರೆ ಮಾಡಿ ಆರೋಪಿ ಸೆರೆಯಾಗಿದ್ದಾರೆ ಎಂದು ಹೇಳಿ ಬರಲು ಹೇಳಿರುತ್ತಾರೆ. ನಾನು, ಚಾಸಾ-1, 2, 7 ಠಾಣೆಗೆ ಹೋಗಿರುತ್ತೇವೆ. ನಿಪಿ-23 ರಲ್ಲಿ ಪೊಲೀಸರು ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಆ ದಿನ ನಾನು ಕೆಲಸಕ್ಕೆ ಹೋಗಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2 ದಿನ ಕೆಲಸಕ್ಕೆ ರಜೆ ಮಾಡಿರುತ್ತೇನೆ. ಆ ದಿನ ಯಾವ ಕಾರಣಕ್ಕೆ ಸಹಿ ಹಾಕಿರುತ್ತೇನೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾರನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ಸಹಿ ಹಾಕಿರುತ್ತೇನೆ. ಪೊಲೀಸ್ ಠಾಣೆಯಿಂದ ನಾನು, ಚಾಸಾ-9 1ನೇ ಅರೋಪಿಯ ಮನೆಗೆ ಪೊಲೀಸ್ ಜೀಪ್ ನಲ್ಲಿ ಹೋಗಿರುತ್ತೇವೆ. 1ನೇ ಆರೋಪಿಯ ಚೆಕ್ಕು ಬಂಧಿಗಳನ್ನು ಹೇಳಬಹುದು. ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ತೋಟ, ಪಶ್ಚಿಮಕ್ಕೆ ದೈವದ ಕಟ್ಟೆ, ದಕ್ಷಿಣಕ್ಕೆ ಎತ್ತರ ಪ್ರದೇಶ ಇದೆ. ನಾನು ಪೊಲೀಸರ ಜೊತೆ ಮನೆಯ ಒಳಗೆ ಹೋಗಿರುತ್ತೇನೆ.

ನಾನು ಚಾಸಾ-1 ರವರಿಗೆ ಯಾವುದೇ ಚಿನ್ನದ ಒಡವೆಗಳನ್ನು ಮಾಡಿಕೊಟ್ಟಿರುವುದಿಲ್ಲ. 1ನೇ ಆರೋಪಿಯ ಮನೆಯ ಪಶ್ಚಿಮಕ್ಕೆ ಒಂದು ಮನೆ ಇದೆ. ಆ ಮನೆಯವರನ್ನು ಪೊಲೀಸರು ಕರೆದಿರುವುದಿಲ್ಲ. 1ನೇ ಆರೋಪಿಯ

ಮನೆ ಹೆಂಚಿನ ಮನೆಯಾಗಿದ್ದು ಅದರಲ್ಲಿ ಎಷ್ಟು ಕೋಣೆಗಳಿದ್ದವು ಎಂದು ನೋಡಿರುವುದಿಲ್ಲ.

ಮು ಮಾ-5 ಕಬ್ಬಿಣದ ರಾಡ್ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸರಿ. ಚಾಸಾ-1 ರವರ ಮನೆಯವರಿಗೂ ಹಾಗೂ 2 ನೇ ಆರೋಪಿಯ ಕುಟುಂಬದವರ ನಡುವೆ ದೈವದ ವಿಚಾರಕ್ಕೆ ಗಲಾಟೆಯಾಗಿದ್ದು ಮಾತುಕತೆ ಇಲ್ಲ ಎಂದರೆ ಸರಿ. ಚಾಸಾ-1 ರವರ ಮನೆಯ ಬಳಿ 2 ನೇ ಆರೋಪಿಯು ಹೋಗುತ್ತಿರುವಾಗ ಚಾಸಾ-1 ರವರು ನಾಯಿ ಚೂ ಬಿಟ್ಟು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಮತ್ತು ಬೆದರಿಕೆ ಹಾಕಿರುತ್ತಾರೆ ಎಂದು 2 ನೇ ಆರೋಪಿ ಚಾಸಾ-1 ರವರ ವಿರುದ್ಧ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರಕ್ಕಾಗಿ ಚಾಸಾ-1 ರವರು 2 ನೇ ಆರೋಪಿಯ ವಿರುದ್ಧ ದ್ವೇಷ ಸಾಧಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು, ಚಾಸಾ-7, 8, 9 ಚಾಸಾ-1 ರವರ ಮನೆಯಲ್ಲಿ ಪಾರ್ಟಿ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಆ ಕಾರಣದಿಂದ ಚಾಸಾ-1 ರವರ ಸುಳ್ಳು ದೂರಿಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಚಾಸಾ-1 ರವರ ಮನೆಯಲ್ಲಿ ಯಾವುದೆ ಕಳ್ಳತನವಾಗಿರುವುದಿಲ್ಲಎಂದರೆ ಸರಿಯಲ್ಲ. ಪೊಲೀಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ ಮತ್ತು ನಾನು 1 ನೇ ಅರೋಪಿ ಮನೆಗೆ ಹೋಗಿರುವುದಿಲ್ಲ, ಪೊಲೀಸರು ಆರೋಪಿಯನ್ನು ತೋರಿಸಿರುವುದಿಲ್ಲ ಮತ್ತು ಯಾವುದೇ ಸ್ವತ್ತನ್ನು ಸ್ವಾ ಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ